ST ALOYSIUS
(DEEMED TO BE UNIVERSITY)
ESTD : 1880
MANGALURU, KARNATAKA 575003 - INDIA

# NEWS CLIPPINGS

## 01-10-2025 TO 31-10-2025

*Varthabharathi 04-10-2025*

# ಮಂಗಳೂರು: ನಾಲ್ವರು ಜೆಸ್ವಿಟ್ ಉಪಯಾಜಕರಿಗೆ ಗುರುದೀಕ್ಷೆ



ಮಂಗಳೂರು, ಅ.4: ಕರ್ನಾಟಕ ಜೆಸ್ವಿಟ್ ಪ್ರಾಂತದ ನಾಲ್ವರು ಉಪಯಾಜಕರುಗಳಿಗೆ ಮಂಗಳೂರು ಬಿಷಪ್ ರೆ.ಫಾ. ಡಾ.ಪೀಟರ್ ಪಾವ್ಲ್ ಸಲ್ಡಾನ ನಗರದ ಫಾತಿಮಾ ಧ್ಯಾನ ಮಂದಿರದಲ್ಲಿ ಯಾಜಕ ದೀಕ್ಷೆ ನೀಡಿದರು.

ಫಾ.ನಿಶಾಂತ್ ನೊರೊನ್ಹ, ಫಾ.ಶರೂನ್ ಡಿಸೋಜ, ಫಾ. ಪೃಥ್ವಿ ರೋಡ್ರಿಗಸ್, ಫಾ.ಪ್ರೀತೇಶ್ ಮಿಸ್ಕಿತ್ ಗುರುದೀಕ್ಷೆ ಪಡೆದ ಉಪಯಾಜಕರಾಗಿದ್ದಾರೆ.

ಬಳಿಕ ಮಾತನಾಡಿದ ಬಿಷಪ್ ಡಾ.ಪೀಟರ್ ಪಾವ್ಲ್ ಸಲ್ಡಾನ, ಓರ್ವ ಯಾಜಕನು ಕ್ರಿಸ್ತನ ಪ್ರವಾದಿಯಾಗಿ ಕ್ರಿಸ್ತನನ್ನು ಎಲ್ಲೆಡೆಯಲ್ಲೂ ಪಸರಿಸುವ ಕಾರ್ಯದಲ್ಲಿ ತೊಡಗಬೇಕು. ಇಂದು ಹಲವು ಕಾರಣಗಳಿಂದ ಸಮಾಜದಲ್ಲಿ ಕತ್ತಲೆ ತುಂಬಿದೆ. ಇಂತಹ ಸನ್ನಿವೇಶದಲ್ಲಿ ತಮ್ಮ ಸೇವೆಗೆ ನೀಡಿದ ಜನತೆಗೆ ಭರವಸೆ ತುಂಬುವ ಮತ್ತು ಕತ್ತಲೆ ದೂರ ಮಾಡುವ ಪ್ರವಾದಿಗಳಾಗಬೇಕು ಎಂದು ಕರೆ ನೀಡಿದರು.

ಕರ್ನಾಟಕ ಜೆಸ್ವಿಟ್ ಪ್ರಾಂತದ ಅಧಿಕಾರಿಗಳಾದ ಫಾ.ಡಯನೀಶಿಯಸ್ ವಾಸ್ ಜೆ.ಸ., ಫಾತಿಮಾ ಧ್ಯಾನ ಮಂದಿರದ ಮುಖ್ಯಗುರು ಫಾ.ಐವನ್ ಮೆಂಡೋನ್ಸಾ ಮತ್ತಿತರರು ಉಪಸ್ಥಿತರಿದ್ದರು.

ಫಾ.ವಿಶ್ವಾಸ್ ಮಿಸ್ಕಿತ್ ಬಲಿಪೂಜೆ ನಿರ್ವಹಿಸಿದರು. ಫಾ.ಲೆಸ್ಟನ್ ಲೋಬೊ ಕಾರ್ಯಕ್ರಮದ ಮೇಲ್ವಿಚಾರಣೆ ವಹಿಸಿಕೊಂಡಿದ್ದರು.

Udyavani 04-10-2025

# ಅಲೋಶಿಯಸ್ ವಿ.ವಿ.ಯಲ್ಲಿ ಹಿಂದಿ ದಿನಾಚರಣೆ




**ಮಹಾನಗರ, ಅ. 4:** ಸಂತ ಅಲೋಶಿಯಸ್ ಪರಿಗಣಿತ ವಿ.ವಿ. ಯ ಭಾಷಾ, ಸಂಸ್ಕೃತಿ ಅಧ್ಯಯನ ಶಾಲೆಯ ಹಿಂದಿ ವಿಭಾಗದ ವತಿಯಿಂದ ಹಿಂದಿ ದಿನಾಚರಣೆಯನ್ನು ಸೋಮವಾರ ವಿ.ವಿ.ಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ಹಿಂದಿ ಪ್ರಾಧ್ಯಾಪಿಕೆ ಡಾ| ನಾಗರತ್ನ ಎನ್. ರಾವ್ ಮಾತನಾಡಿ, ಹಿಂದಿ ಭಾಷೆಯ ಕಲಿಕೆಯ ಪ್ರಾಮುಖ್ಯ, ಅದರ ಸಾಂಸ್ಕೃತಿಕ ಮೌಲ್ಯ, ರಾಷ್ಟ್ರೀಯ ಪ್ರಸ್ತುತತೆ ಮತ್ತು ವಿವಿಧತೆಯಲ್ಲಿ ಏಕತೆಯನ್ನು ಬೆಳೆಸುವಲ್ಲಿ ಪಾತ್ರವನ್ನು ವಿವರಿಸಿದರು. ಜ. 10ನ್ನು ವಿಶ್ವ ಹಿಂದಿ ದಿನವನ್ನಾಗಿ ಆಚರಿಸಲಾಗುತ್ತದೆ. ಸೆ. 12ನ್ನು ಭಾರತದಲ್ಲಿ ಹಿಂದಿ ದಿವಸ್ ಎಂದು ಆಚರಿಸಲಾಗುತ್ತದೆ ಎಂದರು.

ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ಕುಲಪತಿ ಡಾ| ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿದ್ದರು.

ಕಾಲೇಜಿನ ರಿಜಿಸ್ಟ್ರಾರ್ ಡಾ| ಆಲ್ವಿನ್ ಡೇಸಾ, ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಕ್ರಿಸ್ಟೋಫರ್ ಡಿ'ಸೋಜಾ, ಸಿಬಂದಿ ಸಂಯೋಜಕಿ ರೋಯ್ಸಿ ರೇಖಾ ಬ್ರಾಗ್ಸ್, ವಿದ್ಯಾರ್ಥಿ ಸಂಯೋಜಕರಾದ ಅಲಿಯಾ ಖಾನ್, ಅರ್ಮಾನ್ ಶೇಖ್ ಇದ್ದರು. ಸಹ ಸಂಯೋಜಕಿ ಡಾ| ಸಂಧ್ಯಾ ಯು. ಸಿರ್ಸಿಕರ್ ಸ್ವಾಗತಿಸಿ, ಅಲಿಯಾ ಖಾನ್ ವಂದಿಸಿದರು. ಸಾರಾ ನಿರೂಪಿಸಿದರು.

ಸಮಾರೋಪದಲ್ಲಿ ಡಾ| ಆಲ್ವಿನ್ ಡೇಸಾ, ವಿ.ವಿ. ಕ್ಯಾಂಪಸ್ ಅಧಿಕಾರಿ ರಾಬರ್ಟ್ ಜಾನ್ ಅತಿಥಿಯಾಗಿದ್ದರು. ಹಿಂದಿ ದಿವಸ್ ಆಚರಣೆಯ ಭಾಗವಾಗಿ, ಸಾಥ್ ಸತೋರಿ, ಲಗೋರಿ, ತಾರೆ ಜಮೀನ್ ಪರ್, ತಶಾನ್, ಬೆಂಕಿಯಿಲ್ಲದೆ ಅಡುಗೆ ಸಹಿತ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸಮಾರೋಪದಲ್ಲಿ ವಿಜೇತರನ್ನು ಗೌರವಿಸಲಾಯಿತು.

Udayavani 07-10-2025

# ಸಂತ ಅಲೋಶಿಯಸ್ ವಿ.ವಿ.: ರಕ್ತದಾನ ಶಿಬಿರ

**ಮಹಾನಗರ, ಅ. 6:** ರಾಷ್ಟ್ರೀಯ ರಕ್ತದಾನಿಗಳ ದಿನ ಮತ್ತು ಗಾಂಧಿ ಜಯಂತಿಯ ಸಂದರ್ಭ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಎನ್ ಸಿಸಿ ವಿಂಗ್ಸ್ ಮತ್ತು ಯುವ ರೆಡ್ ಕ್ರಾಸ್ ಸಂಘದ ವತಿಯಿಂದ ಜಿಲ್ಲಾ ವೆನ್ಲಾಕ್ ಆಸ್ಪತ್ರೆಯ ಪ್ರಾದೇಶಿಕ ರಕ್ತ ವರ್ಗಾವಣೆ ಕೇಂದ್ರದ ಸಹಯೋಗದೊಂದಿಗೆ ರಕ್ತದಾನ ಶಿಬಿರ ಜರಗಿತು.



ವಿದ್ಯಾರ್ಥಿಗಳು, ಸಿಬಂದಿ, ಎನ್ ಸಿಸಿ ಕೆಡೆಟ್ ಗಳಿಂದ ಒಟ್ಟು 76 ಯುನಿಟ್ ರಕ್ತವನ್ನು ಸಂಗ್ರಹಿಸಲಾಯಿತು. ಶಿಬಿರವನ್ನು ವೆನ್ಲಾಕ್ ರಕ್ತಬ್ಯಾಂಕ್ ನ ವಿಭಾಗದ ಮುಖ್ಯಸ್ಥ ಡಾ। ಶರತ್ ಕುಮಾರ್ ಉದ್ಘಾಟಿಸಿದರು. ಸಹಕುಲಪತಿ ರೆ। ಡಾ। ಮೆಲ್ವಿನ್ ಡಿ'ಕುನ್ಹಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎನ್ ಸಿಸಿ ಮತ್ತು ಯುವ ರೆಡ್ ಕ್ರಾಸ್ ಸಂಘದ ಅಧಿಕಾರಿಗಳು, ಸ್ವಯಂಸೇವಕರು ಶಿಬಿರವನ್ನು ಸಂಯೋಜಿಸಿದರು.

Udayavani 09-10-2025

# ಅಲೋಶಿಯಸ್ ವೇದಿಕೆಗೆ ಗೋಲ್ಡನ್ ಗರ್ಲ್ ರೆಮೋನಾ ಹೆಸರು

**ಮಹಾನಗರ, ಅ. 8:** ಇತ್ತೀಚೆಗೆ ಸಂತ ಅಲೋಶಿಯಸ್ ವಿವಿ ವಿದ್ಯಾರ್ಥಿನಿ ರೆಮೊನಾ ಇವೆಟ್ ಪಿರೇರಾ ಅವರು ವಿವಿಯ ಎಲ್ ಸಿಆರ್ ಐ ಸಭಾಂಗಣದ ವೇದಿಕೆಯಲ್ಲಿ ನಿರಂತರ 170 ಗಂಟೆಗಳ ಕಾಲ ಭರತನಾಟ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲೆ ಬರೆದಿದ್ದು ಇದೀಗ ಅಲೋಶಿಯಸ್ ವಿವಿಯು ಆ ವೇದಿಕೆಗೆ 'ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ' ಎಂದು ಹೆಸರಿಟ್ಟು ವಿಶೇಷ ರೀತಿಯಲ್ಲಿ ಅವರಿಗೆ ಅಭಿನಂದನೆ ಸಲ್ಲಿಸಿದೆ.

ರೆಮೋನಾ ಇವೆಟ್ ಪಿರೇರಾ ಅವರು ಜುಲೈ 21ರಿಂದ 28ರವರೆಗೆ ಸಂತ ಅಲೋಶಿಯಸ್ ಕಾಲೇಜಿನ ಎಲ್ ಸಿಆರ್ ಐ ಸಭಾಂಗಣದಲ್ಲಿ ಏಳು ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ನಲ್ಲಿ ತನ್ನ ಹೆಸರನ್ನು ದಾಖಲಿಸಿ ಕೊಂಡಿದ್ದರು.



ರೆಮೋನಾಇವೆಟ್ಪಿರೇರಾಮಾತನಾಡಿ, ಸಾವಿರಾರು ಪ್ರತಿಭೆಗಳನ್ನು ಕಂಡ ಈ ಕಾಲೇಜು, ನನ್ನ ಸಾಧನೆಯನ್ನು ಗುರುತಿಸಿ ಇಲ್ಲಿನ ವೇದಿಕೆಗೆ 'ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ' ಎಂದು ನಾಮಕರಣ ಮಾಡಿದ್ದು ನನ್ನ ಜೀವನದ ಮರೆಯಲಾಗದ ಕ್ಷಣ. ಮುಂದಕ್ಕೆ ಭರತನಾಟ್ಯದಲ್ಲಿ ಪಿಎಚ್. ಡಿ. ಮಾಡಬೇಕೆಂಬ ಕನಸಿದ್ದು ಈ ಕನಸನ್ನು ಆದಷ್ಟು ಶೀಘ್ರದಲ್ಲಿ ನನಸಾಗಿಸುತ್ತೇನೆ ಎಂದರು. ಅಲ್ಲದೆ ವಿಶೇಷ ಚೇತನರಿಗೆ ಮತ್ತು ಮಂಗಳಮುಖಿಯರಿಗೆ ಭರತನಾಟ್ಯ ಕಲಿಸುತ್ತಿದ್ದು ಮುಂದೆಯೂ ಕಲಿಸುತ್ತೇನೆ ಎಂದರು.

*Janamithra 08-10-2025*

# ವೇದಿಕೆಗೆ ಸಾಧಕಿ ವಿದ್ಯಾರ್ಥಿನಿಯ ಹೆಸರು




ಮಂಗಳೂರು: ನಿರಂತರ 170ಗಂಟೆಗಳ ಕಾಲ ಭರತನಾಟ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್ ದಾಖಲಿಸಿದ ಮಂಗಳೂರಿನ ರೆಮೋನಾ ಇವೆಟ್ಟಾ ಪಿರೇರಾಗೆ ಸಂತ ಅಲೋಶಿಯಸ್ ಕಾಲೇಜು ಆಕೆ ಎಂದೂ ಮರೆಯದ ವಿಶೇಷ ಗೌರವ ಸಲ್ಲಿಸಿ ಅಭಿನಂದಿಸಿದೆ.

ರೆಮೋನಾ ಇವೆಟ್ಟೆ ಪಿರೇರಾ ಜು.21ರಿಂದ 28ರವರೆಗೆ ಸಂತ ಅಲೋಶಿಯಸ್ ಕಾಲೇಜಿನ ಎಲ್‌ಸಿಆರ್‌ಐ ಸಭಾಂಗಣದಲ್ಲಿ ಭರತನಾಟ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್ ದಾಖಲಿಸಿದ್ದಳು.

ಇದೀಗ ಕಾಲೇಜು ಆಡಳಿತ ಮಂಡಳಿ ತಮ್ಮ ಕಾಲೇಜಿನ ವಿದ್ಯಾರ್ಥಿನಿ ನಾಟ್ಯವಾಡಿ ದಾಖಲೆ ಬರೆದ ವೇದಿಕೆಗೆ 'ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ' ಎಂದು ಹೆಸರಿಟ್ಟು ವಿಶೇಷ ರೀತಿಯಲ್ಲಿ ಅಭಿನಂದನೆ ಸಲ್ಲಿಸಿದೆ.

ರೆಮೋನಾ ಇವೆಟ್ಟಾ ಪಿರೇರಾ ಮಾತನಾಡಿ, ಅಲೋಶಿಯಸ್ ಕಾಲೇಜು ಬಹಳ ಹಳೆಯ ಕಾಲೇಜು. ಜೊತೆಗೆ ಡೀಮ್ಡ್ ಯುನಿವರ್ಸಿಟಿ. ಇದು ಸಾವಿರಾರು ಪ್ರತಿಭೆಗಳನ್ನು ಕಂಡ ಕಾಲೇಜು.

ಆದರೆ ನನ್ನ ಪ್ರತಿಭೆಯನ್ನು ಗುರುತಿಸಿ ಇಲ್ಲಿನ ವೇದಿಕೆಗೆ ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ ಎಂದು ನಾಮಕರಣ ಮಾಡಿದ್ದು, ನನ್ನ ಜೀವನದ ಅತೀವ ಸಂತಸದ ಕ್ಷಣ ಎಂದರು.

ಮುಂದಕ್ಕೆ ಭರತನಾಟ್ಯದಲ್ಲಿ ಇನ್ನೂ ಸಾಧನೆ ಮಾಡಬೇಕು.

ಭರತನಾಟ್ಯದಲ್ಲಿಯೇ ಪಿಎಚ್‌ಡಿ ಮಾಡಬೇಕೆಂಬ ಕನಸು ಇದೆ. ಆದಷ್ಟು ಶೀಘ್ರ ಈ ಕನಸು ನನಸಾಗಿಸುತ್ತೇನೆ ಎಂದರು.

*Vijayakarnataka 09-10-2025*

# ಸಂತ ಅಲೋಶಿಯಸ್ ವಿವಿ ವೇದಿಕೆಗೆ ಗೋಲ್ಡನ್ ಗರ್ಲ್ ರೆಮೋನಾ ಹೆಸರು




**ಸಂತ ಅಲೋಶಿಯಸ್ ವಿವಿಯ ಎಲ್‌ಸಿಆರ್‌ಐ ಸಭಾಂಗಣದ ವೇದಿಕೆಗೆ ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ ಎಂದು ನಾಮಕರಣ ಮಾಡಲಾಯಿತು.**

■ **ವಿಕ ಸುದ್ದಿಲೋಕ** ಮಂಗಳೂರು

ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಎಲ್‌ಸಿಆರ್‌ಐ ಸಭಾಂಗಣದ ವೇದಿಕೆಗೆ ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ ಎಂದು ನಾಮಕರಣ ಮಾಡ ಲಾಗಿದೆ.

ವಿದ್ಯಾರ್ಥಿನಿ ರೆಮೊನಾ ಇವೆಟ್ ಪಿರೇರ ಇತ್ತೀಚೆಗೆ ವಿವಿಯ ಎಲ್‌ಸಿಆರ್‌ಐ ಸಭಾಂಗಣದ ವೇದಿಕೆಯಲ್ಲೇ ನಿರಂತರ 170 ಗಂಟೆಗಳ ಕಾಲ ಭರತನಾಟ್ಯ ಪ್ರದರ್ಶಿಸಿ, ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲೆ ಬರೆದಿದ್ದರು.

ಇದೀಗ ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ ಎಂದು ಹೆಸರಿಟ್ಟು ವಿಶೇಷ ರೀತಿಯಲ್ಲಿ ಆಕೆಗೆ ಅಭಿನಂದನೆ ಸಲ್ಲಿಸಿದೆ.

ರೆಮೋನಾ ಇವೆಟ್ಟಾ ಪಿರೇರ ಮಾತನಾಡಿ, "ಸಾವಿರಾರು ಪ್ರತಿಭೆ ಗಳನ್ನು ಕಂಡ ಈ ಕಾಲೇಜು, ನನ್ನ ಸಾಧನೆ ಗುರುತಿಸಿ ಇಲ್ಲಿನ ವೇದಿಕೆಗೆ 'ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ' ಎಂದು ನಾಮಕರಣ ಮಾಡಿದ್ದು, ನನ್ನ ಜೀವನದ ಮರೆಯಲಾಗದ ಕ್ಷಣ," ಎಂದು ಸಂತಸ ವ್ಯಕ್ತಪಡಿಸಿ, "ಮುಂದಕ್ಕೆ ಭರತನಾಟ್ಯದಲ್ಲಿ ಪಿಎಚ್‌ಡಿ ಮಾಡಬೇಕೆಂಬ ಕನಸಿದ್ದು, ಆದಷ್ಟು ಶೀಘ್ರ ನನಸಾಗಿಸುತ್ತೇನೆ. ವಿಶೇಷ ಚೇತನರಿಗೆ ಮತ್ತು ಮಂಗಳಮುಖಿ ಯರಿಗೆ ಭರತನಾಟ್ಯ ಕಲಿಸುತ್ತಿದ್ದು ಮುಂದೆಯೂ ಕಲಿಸುತ್ತೇನೆ," ಎಂದರು.

Vijayavani 09-10-2025

## ಭರತನಾಟ್ಯ ವಿಶ್ವ ದಾಖಲೆ ಸಾಧನೆಗೆ ಅಲೋಶಿಯಸ್ ಗೌರವ

# ಕಾಲೇಜು ವೇದಿಕೆಗೆ ರೆಮೋನಾ ಹೆಸರು




**ವೇದಿಕೆಗೆ 'ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ' ಎಂದು ಹೆಸರಿಡುವ ಸಮಾರಂಭದಲ್ಲಿ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿ ರೆ.ಫಾ.ಪ್ರವೀಣ್ ಮಾರ್ಟಿಸ್ ಎಸ್.ಜೆ., ರೆಮೋನಾ ಇವೆಟ್ಟಾ ಪಿರೇರಾ ಮೊದಲಾದವರಿದ್ದರು.**

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ರೆಮೋನಾ ಇವೆಟ್ ಪಿರೇರಾ ಅವರು ವಿವಿಯ ಎಲ್‌ಸಿಆರ್‌ಐ ಸಭಾಂಗಣದ ವೇದಿಕೆಯಲ್ಲಿ ನಿರಂತರ 170 ಗಂಟೆಗಳ ಕಾಲ ಭರತನಾಟ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ದಾಖಲೆ ಬರೆದಿದ್ದು, ಇದೀಗ ಅಲೋಶಿಯಸ್ ವಿವಿಯು ಆ ವೇದಿಕೆಗೆ 'ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ' ಎಂದು ಹೆಸರಿಟ್ಟು ವಿಶೇಷ ರೀತಿಯಲ್ಲಿ ಆಕೆಗೆ ಅಭಿನಂದನೆ ಸಲ್ಲಿಸಿದೆ.

ರೆಮೋನಾ ಇವೆಟ್ ಪಿರೇರಾ 2025ರ ಜುಲೈ 21ರಿಂದ 28ರವರೆಗೆ ಸಂತ ಅಲೋಶಿಯಸ್ ಕಾಲೇಜಿನ ಎಲ್ ಸಿಆರ್‌ಐ ಸಭಾಂಗಣದಲ್ಲಿ ಏಳು ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ತನ್ನ ಹೆಸರು ದಾಖಲಿಸಿಕೊಂಡಿದ್ದರು.

ಈ ಸಂದರ್ಭ ರೆಮೋನಾ ಇವೆಟ್ಟಾ ಪಿರೇರಾ ಮಾತನಾಡಿ, ಸಾವಿರಾರು ಪ್ರತಿಭೆಗಳನ್ನು ಕಂಡ ಈ ಕಾಲೇಜು ನನ್ನ ಸಾಧನೆಯನ್ನು ಗುರುತಿಸಿ ಇಲ್ಲಿನ ವೇದಿಕೆಗೆ ಗೋಲ್ಡನ್ ಗರ್ಲ್ ರೆಮೋನಾ ವೇದಿಕೆ ಎಂದು ನಾಮಕರಣ ಮಾಡಿದ್ದು ನನ್ನ ಜೀವನದ ಮರೆಯಲಾಗದ ಕ್ಷಣ ಎಂದು ಸಂತಸ ವ್ಯಕ್ತಪಡಿಸಿದರು. ಮುಂದಕ್ಕೆ ಭರತನಾಟ್ಯದಲ್ಲಿ ಪಿಎಚ್.ಡಿ. ಮಾಡಬೇಕೆಂಬ ಕನಸಿದ್ದು ಈ ಕನಸನ್ನು ಆದಷ್ಟು ಶೀಘ್ರದಲ್ಲಿ ನನಸಾಗಿಸುತ್ತೇನೆ ಎಂದರು. ಅಂಗವಿಕಲರಿಗೆ ಮತ್ತು ಮಂಗಳಮುಖಿಯರಿಗೆ ಭರತನಾಟ್ಯ ಕಲಿಸುತ್ತಿದ್ದು, ಮುಂದೆಯೂ ಕಲಿಸುತ್ತೇನೆ ಎಂದರು.

Vijayakarnataka 10-10-2025

# ಇನ್‌ಕ್ಯುಬೇಶನ್ ಜಾಗೃತಿ ಕಾರ್ಯಾಗಾರ

**ಮಂಗಳೂರು:** ಎಂಎಸ್‌ಎಂಇಗಳ ಕಾರ್ಯಕ್ಷಮತೆ ಹೆಚ್ಚಿಸಲು ಮತ್ತು ವೇಗಗೊಳಿಸುವ ನಿಟ್ಟಿನಲ್ಲಿ ರ್‍ಯಾಂಪ್ ಯೋಜನೆಯಡಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಎಂಎಸ್‌ಎಂಇ- ಡಿಎಫ್‌ಒ ಸಹಯೋಗದಲ್ಲಿ ಇನ್ ಕ್ಯುಬೇಶನ್ ಬಗ್ಗೆ ಜಾಗೃತಿ ಕಾರ್ಯಾಗಾರ ಅ.14 ರಂದು ನಗರದ ಸೈಂಟ್ ಅಲೋಶಿಯಸ್ (ಡೀಮ್ಡ್ ಟು ಬಿ ಯುನಿವರ್ಸಿಟಿ) ಮತ್ತು ಅ.15ರಂದು ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

Udayavani 10-10-2025

# ಅಲೋಶಿಯಸ್ ವಿ.ವಿ.: ಇಂದು ಅಂತರ್ ಕಾಲೇಜು ಉತ್ಸವ

**ಮಹಾನಗರ, ಅ. 9:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅ. 10ರಂದು ಪ.ಪೂ. ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಮಟ್ಟದ ಉತ್ಸವ 'ರಿಸೋಇನೆನ್ಸ್' 2025 ಅನ್ನು ಆಯೋಜಿಸಿದೆ.

ಈ ಉತ್ಸವದಲ್ಲಿ ಬ್ರೈನ್‌ವೇವ್ (ಕ್ವಿಜ್), ಐಡಿಯಾಜಾಮ್ (ಐಡಿಯಾಥಾನ್), ಕಂಟ್ರೋಲ್ + ಆಲ್ಟ್ + ಎಸ್ಕೇಪ್, (ಎಸ್ಕೇಪ್ ರೂಮ್), ರೀಲ್‌ಗೇರ್ (ರೀಲ್ ಮೇಕಿಂಗ್), ಟ್ರಾಶ್‌ಫಾರ್ಮರ್ಸ್ (ವೆಲ್ತ್ ಔಟ್ ಆಫ್ ವೇಸ್ಟ್), ಕಾರ್ಟ್‌ಕ್ರಾಫ್ಟ್ (ಬಿಲ್ಡ್-ಎ - ಕಾರ್ಟ್), ಮತ್ತು ಎನ್‌ಕೋರ್(ವೆರೈಟಿ ಎಂಟರ್‌ಟೈನ್‌ಮೆಂಟ್) ಮುಂತಾದ ಸ್ಪರ್ಧೆಗಳಿವೆ. ವಿದ್ಯಾರ್ಥಿಗಳು, ಸಂಸ್ಥೆಗಳು www.soefest.com ನಲ್ಲಿ ನೋಂದಾಯಿಸಿಕೊಳ್ಳಬಹುದು ಎಂದು ಉತ್ಸವ ಸಂಯೋಜಕಿ ಡಾ| ಗೀತಾ ಪಿಂಟೋ ತಿಳಿಸಿದ್ದಾರೆ.

*Kannada Prabha 10-10-2025*

# ಗ್ರಂಥಪಾಲಕ ಉದಯಗೆ ಡಾಕ್ಟರೇಟ್ ಪದವಿ

**ಕುಂದಾಪುರ:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಗ್ರಂಥಪಾಲಕ ಉದಯ ಅವರ ಸಂಶೋಧನಾ ಮಹಾಪ್ರಬಂಧಕ್ಕೆ ಮಂಗೂರು ವಿಶ್ವವಿದ್ಯಾನಿಲಯ ಡಾಕ್ಟರ್ಆಫ್ ಫಿಲಾಸಫಿ (ಪಿಎಚ್‌ಡಿ) ಪದವಿ ನೀಡಿದೆ. ಅವರು ಮಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಮತ್ತು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮಾಜಿ ಅಧ್ಯಕ್ಷ ಡಾ. ಖೈಸರ್ಮುನೀಬುಲ್ಲಾ ಖಾನ್ ಮಾರ್ಗದರ್ಶನದಲ್ಲಿ 'ಮಂಗಳೂರು ಮತ್ತು ಮೈಸೂರು ಪ್ರದೇಶಗಳಲ್ಲಿ ಕಾಲೇಜು ಗ್ರಂಥಾಲಯಗಳ ಅಭಿವೃದ್ಧಿಯಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗದ ಪಾತ್ರ: ಒಂದು ಅಧ್ಯಯನ' ಪ್ರಬಂಧ ಮಂಡಿಸಿದ್ದರು ಅವರು ಉಡುಪಿ ಜಿಲ್ಲೆಯ ಬೈಂದೂರಿನ ಗಂಗನಾಡು, ತೊಗ್ರಿಯ ವೆಂಕ-ಗುಲಾಬಿ ದಂಪತಿ ಪುತ್ರ.



*Vijayakarnataka 10-10-2025*

# ಗ್ರಂಥಪಾಲಕ ಉದಯ್‌ಗೆ ಪಿಎಚ್‌ಡಿ

**ಮಂಗಳೂರು:** ಸ್ಟೆಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಗ್ರಂಥಪಾಲಕ ಉದಯ ಅವರ 'ಮಂಗಳೂರು ಮತ್ತು ಮೈಸೂರು ಪ್ರದೇಶಗಳಲ್ಲಿ ಕಾಲೇಜು ಗ್ರಂಥಾಲಯಗಳ ಅಭಿವೃದ್ಧಿಯಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗದ ಪಾತ್ರ: ಒಂದು ಅಧ್ಯಯನ' ಸಂಶೋಧನಾ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯ ಪಿಎಚ್‌ಡಿ ನೀಡಿ ಗೌರವಿಸಿದೆ.

ಅವರು ಮಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮಾಜಿ ಅಧ್ಯಕ್ಷ ಡಾ.ಖೈಸರ್ ಮುನೀಬುಲ್ಲಾ ಖಾನ್ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ಉಡುಪಿ ಜಿಲ್ಲೆಯ ಬೈಂದೂರಿನ ಗಂಗನಾಡು ತೊಗ್ರಿಯ ವೆಂಕ ಮತ್ತು ಗುಲಾಬಿ ದಂಪತಿ ಪುತ್ರ.



*Udayavani 19-10-2025*

# ಉದಯ ಅವರಿಗೆ ಪಿಎಚ್.ಡಿ

**ಮಹಾನಗರ, ಅ. 19:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿವಿಯ ಗ್ರಂಥಪಾಲಕರಾಗಿರುವ ಉದಯ ಅವರ 'ಮಂಗಳೂರು ಮತ್ತು ಮೈಸೂರು ಪ್ರದೇಶಗಳಲ್ಲಿ ಕಾಲೇಜು ಗ್ರಂಥಾಲಯಗಳ ಅಭಿವೃದ್ಧಿಯಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗದ ಪಾತ್ರ- ಒಂದು ಅಧ್ಯಯನ ಎಂಬ ಸಂಶೋಧನ ಪ್ರಬಂಧಕ್ಕಾಗಿ ಮಂಗಳೂರು ವಿವಿ ಪಿಎಚ್.ಡಿ ನೀಡಿದೆ. ಅವರು ಮಂಗಳೂರು ವಿವಿಯ ನಿವೃತ್ತ ಪ್ರಾಧ್ಯಾಪಕ ಮತ್ತು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮಾಜಿ ಅಧ್ಯಕ್ಷ ಡಾ। ಖೈಸರ್‌ಮುನೀಬುಲ್ಲಾ ಖಾನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಮಂಡಿಸಿದ್ದರು. ಇವರು ಉಡುಪಿ ಜಿಲ್ಲೆಯ ಬೈಂದೂರಿನ ಗಂಗನಾಡು, ತೊಗ್ರಿಯ ವೆಂಕ ಮತ್ತು ಗುಲಾಬಿ ದಂಪತಿಯ ಪುತ್ರ.



Samyukta Karnataka 22-10-2025



# ಕೈಗಾರಿಕಾ ಉತ್ತೇಜನ ಕಾರ್ಯಾಗಾರ

**ಸಂ.ಕ.ಸಮಾಚಾರ, ಮಂಗಳೂರು**

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಎಮ್.ಎಸ್.ಎಮ್.ಇ ನಿರ್ದೇಶನಾಲಯ, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್, ಜಿಲ್ಲಾ ಕೈಗಾರಿಕಾ ಕೇಂದ್ರ, ದಕ್ಷಿಣ ಕನ್ನಡ ಹಾಗೂ ಎಂ.ಎಸ್.ಎಂ.ಇ ಡಿ.ಎಫ್.ಒ ಮಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ರ್‍ಯಾಂಪ್ ಯೋಜನೆಯಡಿಯಲ್ಲಿ ಹೊಸ ಉದ್ದಿಮೆಗಳ ಇನ್‌ಕ್ಯುಬೇಶನ್ ಬಗ್ಗೆ ಕಾರ್ಯಾಗಾರ ಸಂತ ಅಲೋಶಿಯಸ್ ನಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಸಂತ ಅಲೋಶಿಯಸ್ ಕಾಲೇಜಿನ ಉಪಕುಲಪತಿ ಡಾ.ಪ್ರವೀಣ್ ಮಾರ್ಟಿಸ್.ಎಸ್.ಜೆ, ಸಂತ ಅಲೋಶಿಯಸ್ ಸಂಸ್ಥೆಯ ರಿಜಿಸ್ಟ್ರಾರ್ ಡಾ. ರೊನಾಲ್ಡ್ ನಜರೆತ್, ಸಂತ ಅಲೋಶಿಯಸ್ ಸಂಸ್ಥೆಯ ಉದ್ಯಮಶೀಲತೆ ಮತ್ತು ಸಲಹಾ ವಿಭಾಗದ ಅಧ್ಯಕ್ಷ ಸವಿನ್ ಪ್ರೇಮಿ ಲೋಬೋ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಗೋಕುಲದಾಸ್ ನಾಯಕ್, ಸಿ.ಟಿ.ಒ ಸಹ–ಸಂಸ್ಥಾಪಕ ಪ್ರವೀಣ್ ಕ್ಯಾಸ್ಟೆಲಿನೋ, ಕೆನರಾ ಚೇಂಬರ್ ಅಧ್ಯಕ್ಷ ಪಿಬಿ ಅಹಮದ್ ಮುದಸ್ಸರ್, ಎಂಎಸ್ಎಂಇ ಡಿ.ಎಫ್.ಒ ಸಹಾಯಕ ನಿರ್ದೇಶಕ ಸುಂದರ್ ಎಸ್.ಮಾಳ, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್ ಪೇಟೆಂಟ್ ಸೆಲ್ ಮುಖ್ಯಸ್ಥ ಡಾ.ಶರತ್ ಕುಮಾರ್ ಪಟ್ಟಾರ್ ಉಪಸ್ಥಿತರಿದ್ದರು.

ಡಾ.ರೂಬನ್ ಎಸ್. ವಿದ್ಯಾರ್ಥಿಗಳಿಗೆ ಇನ್‌ಕ್ಯುಬೇಶನ್ ಬಗ್ಗೆ ಮಾಹಿತಿಯನ್ನು ನೀಡಿದರು. ಒಟ್ಟು 120 ವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದರು.

Vijayavani 22-10-2025

# ಸಂತ ಅಲೋಶಿಯಸ್ ಕಾಲೇಜಲ್ಲಿ ಕಾರ್ಯಾಗಾರ

**ಮಂಗಳೂರು:** ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಎಂ.ಎಸ್.ಎಂ.ಇ ನಿರ್ದೇಶನಾಲಯ, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್, ಜಿಲ್ಲಾ ಕೈಗಾರಿಕಾ ಕೇಂದ್ರ, ದಕ್ಷಿಣ ಕನ್ನಡ ಹಾಗೂ ಎಂ.ಎಸ್.ಎಂ.ಇ ಡಿ.ಎಫ್.ಒ ಮಂಗಳೂರು ಆಶ್ರಯದಲ್ಲಿ ರ್‍ಯಾಂಪ್ ಯೋಜನೆಯಡಿಯಲ್ಲಿ ಇನ್‌ಕ್ಯುಬೇಶನ್ ಬಗ್ಗೆ ಕಾರ್ಯಾಗಾರ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಂತ ಅಲೋಶಿಯಸ್ ಕಾಲೇಜಿನ ಉಪಕುಲಪತಿ ಡಾ.ಪ್ರವೀಣ್ ಮಾರ್ಟಿಸ್, ರಿಜಿಸ್ಟ್ರಾರ್ ಡಾ.ರೊನಾಲ್ಡ್ ನಜರೆತ್, ಉದ್ಯಮಶೀಲತೆ ಮತ್ತು ಸಲಹಾ ವಿಭಾಗದ ಅಧ್ಯಕ್ಷ ಸವಿನ್ ಪ್ರೇಮಿ ಲೋಬೋ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಗೋಕುಲದಾಸ್ ನಾಯಕ್, ಸಿ.ಟಿ.ಒ ಸಹಸಂಸ್ಥಾಪಕ ಪ್ರವೀಣ್ ಕ್ಯಾಸ್ಟೆಲಿನೋ, ಕೆನರಾ ಚೇಂಬರ್ ಅಧ್ಯಕ್ಷ ಪಿ.ಬಿ.ಅಹಮದ್ ಮುದಸ್ಸರ್ ಮತ್ತಿತರರಿದ್ದರು. ಡಾ.ರೂಬನ್ ಎಸ್. ವಿದ್ಯಾರ್ಥಿಗಳಿಗೆ ಇನ್‌ಕ್ಯುಬೇಶನ್ ಬಗ್ಗೆ ಮಾಹಿತಿ ನೀಡಿದರು. ಒಟ್ಟು 120 ವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದರು.

*Udayavani 22-10-2025*

# ಅಲೋಶಿಯಸ್ ವಿವಿಯಲ್ಲಿ ಕಾರ್ಯಾಗಾರ



**ಮಹಾನಗರ, ಅ. 21:** ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಎಂ.ಎಸ್.ಎಂ.ಇ ನಿರ್ದೇಶನಾಲಯ, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್, ಜಿಲ್ಲಾ ಕೈಗಾರಿಕಾ ಕೇಂದ್ರ, ದಕ್ಷಿಣ ಕನ್ನಡ ಹಾಗೂ ಎಂ.ಎಸ್.ಎಂ.ಇ. ಡಿ.ಎಫ್.ಒ. ಮಂಗಳೂರು ಸಂಯುಕ್ತ ಆಶ್ರಯದಲ್ಲಿ ರ್‍ಯಾಂಪ್ ಯೋಜನೆಯಡಿಯಲ್ಲಿ ಇನ್‌ಕ್ಯುಬೇಶನ್ ಬಗ್ಗೆ ಕಾರ್ಯಾಗಾರ ಸಂತ ಅಲೋಶಿಯಸ್ ವಿ.ವಿ.ಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ವಿ.ವಿ.ಯ ಉಪಕುಲಪತಿ ಡಾ| ಪ್ರವೀಣ್ ಮಾರ್ಟಿಸ್ ಎಸ್.ಜೆ., ಸಂತ ಅಲೋಶಿಯಸ್ ಸಂಸ್ಥೆಯ ರಿಜಿಸ್ಟ್ರಾರ್ ಡಾ| ರೊನಾಲ್ಡ್ ನಜರೆತ್, ಸಂತ ಅಲೋಶಿಯಸ್ ಸಂಸ್ಥೆಯ ಉದ್ಯಮಶೀಲತೆ ಮತ್ತು ಸಲಹಾ ವಿಭಾಗದ ಅಧ್ಯಕ್ಷ ಸವಿನ್ ಪ್ರೇಮಿ ಲೋಬೋ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಗೋಕುಲದಾಸ್ ನಾಯಕ್, ಸಿ.ಟಿ.ಒ. ಸಹ-ಸಂಸ್ಥಾಪಕ ಪ್ರವೀಣ್ ಕ್ಯಾಸ್ಟೆಲಿನೋ, ಕೆನರಾ ಚೇಂಬರ್ ಅಧ್ಯಕ್ಷ ಪಿ.ಬಿ. ಅಹಮದ್ ಮುದಸ್ಸರ್, ಎಂ.ಎಸ್.ಎಂ.ಇ ಡಿ.ಎಫ್. ಒ. ಸಹಾಯಕ ನಿರ್ದೇಶಕ ಸುಂದರ್ ಎಸ್. ಮಾಳ, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್ ಪೇಟೆಂಟ್ ಸೆಲ್ ಮುಖ್ಯಸ್ಥ ಡಾ| ಶರತ್ ಕುಮಾರ್ ಪಟ್ಟಾರ್ ಉಪಸ್ಥಿತರಿದ್ದರು.

ಡಾ| ರೂಬನ್ ಎಸ್. ವಿದ್ಯಾರ್ಥಿಗಳಿಗೆ ಇನ್‌ಕ್ಯುಬೇಶನ್ ಬಗ್ಗೆ ಮಾಹಿತಿ ನೀಡಿದರು. 120 ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದರು.

Varthabharathi 30-10-2025

# ಹಿರಿಯ ನಾಗರಿಕರಿಗೆ ಆರೈಕೆ: ಸರ್ಟಿಫಿಕೆಟ್ ಕೋರ್ಸ್

ಮಂಗಳೂರು, ಅ.29: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ ಹಾಗೂ ಡೆವಲಪ್‌ಮೆಂಟ್ ಎಜುಕೇಶನ್ ಸರ್ವೀಸ್ (ಡೀಡ್ಸ್) ಮಂಗಳೂರು ಜಂಟಿ ಸಹಯೋಗದೊಂದಿಗೆ ಹಿರಿಯ ನಾಗರಿಕರಿಗೆ ಆರೈಕೆದಾರರಾಗಲು ಇಚ್ಛಿಸುವ ಆಸಕ್ತರಿಗೆ ಸರ್ಟಿಫಿಕೆಟ್ ಕೋರ್ಸ್ ಆರಂಭಿಸಲಾಗುತ್ತಿದೆ.

ಈ ಕೋರ್ಸ್‌ನಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳು ಹಿರಿಯ ನಾಗರಿಕರ ದೈಹಿಕ, ಮಾನಸಿಕ ಆರೋಗ್ಯವನ್ನು ಕಾಪಾಡಲು ಉನ್ನತ ಮಟ್ಟದ ಸೇವೆಯನ್ನು ನೀಡಲು ಪರಿಣತಿಯನ್ನು ಹೊಂದುತ್ತಾರೆ. ತರಬೇತಿಯಲ್ಲಿ ಉತ್ತೀರ್ಣರಾಗುವ ಯಾವುದೇ ಅಭ್ಯರ್ಥಿ ಸ್ವಗೃಹ, ನೆರೆಹೊರೆ, ಆಸ್ಪತ್ರೆಗಳು ಆಶ್ರಯತಾಣ, ಡೇ ಕೇರ್ ಕೇಂದ್ರಗಳಲ್ಲಿ ಸೇವೆ ಒದಗಿಸಲು ಅರ್ಹತೆ ಹೊಂದುತ್ತಾರೆ ಎಂದು ಸಂತ ಅಲೋಶಿಯಸ್ ವಿವಿಯ ಪ್ರೊವೈಸ್ ಚಾನ್ಸಲರ್ ಫಾ.ಡಾ.ಮೆಲ್ವಿನ್ ಡಿಕುನ್ಹ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೋರ್ಸ್ ಅವಧಿ ಒಂದು ತಿಂಗಳು (26 ದಿನಗಳು ಒಟ್ಟು 162 ಗಂಟೆಗಳು). ನ.3ರಂದು ಮೊದಲ ಬ್ಯಾಚ್, ಜನವರಿ 3ರಂದು ಎರಡನೇ ಬ್ಯಾಚ್ ಆರಂಭಗೊಳ್ಳಲಿದೆ. ಬಳಿಕ ಕಾಲಕಾಲಕ್ಕೆ ಬ್ಯಾಚ್ ಮುಂದುವರಿಯಲಿದೆ. ಉದ್ಯೋಗದಲ್ಲಿರುವವರಿಗೆ ವಾರಾಂತ್ಯದ ಬ್ಯಾಚನ್ನು 2026ರ ಫೆಬ್ರವರಿಯಿಂದ ನಡೆಸಲಾಗುವುದು (ವರ್ಷದ 26 ರವಿವಾರ). ಮಂಗಳೂರು ನಗರದ ಹೊರವಲಯದವರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಕೋರ್ಸ್ ವೆಚ್ಚ ಪ್ರತೀ ಅಭ್ಯರ್ಥಿಗೆ 7,500 ರೂ., ಊಟ, ವಸತಿ ಪ್ರತ್ಯೇಕ. ಆರ್ಥಿಕ ಅನಾನುಕೂಲತೆ ಇರುವ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನ ಅಥವಾ ಶುಲ್ಕದಲ್ಲಿ ರಿಯಾಯತಿ ನೀಡಲಾಗುವುದು ಎಂದರು.

ತರಬೇತಿ ಹೊಂದಿ ಪ್ರಮಾಣ ಪತ್ರ ಪಡೆದವರಿಗೆ ವಿವಿಧ ಆಸ್ಪತ್ರೆ, ವೃದ್ಧಾಶ್ರಮ, ಹಿರಿಯ ನಾಗರಿಕರ ಡೇ ಕೇರ್ ಕೇಂದ್ರಗಳಲ್ಲಿ ಆರೈಕೆದಾರರನ್ನು ಒದಗಿಸುವ ಏಜೆನ್ಸಿಗಳಲ್ಲಿ ಉದ್ಯೋಗ ಲಭ್ಯ.

ತುಳು, ಕೊಂಕಣಿ, ಬ್ಯಾರಿ, ಅರಬಿಕ್, ಮಲೆಯಾಳಂ, ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಹೀಬ್ರೂ ಭಾಷೆಗಳನ್ನು ಬಲ್ಲವರಿಗೆ ವಿದೇಶಗಳಲ್ಲಿ ವಿಪುಲ ಅವಕಾಶ. ದ್ವಿಚಕ್ರ ವಾಹನ ಚಲಾಯಿಸಲು ಬಲ್ಲವರಿಗೆ, ಪಾಸ್‌ಪೋರ್ಟ್ ಇದ್ದವರಿಗೆ ತಕ್ಷಣ ಉದ್ಯೋಗ ಅವಕಾಶ. ಸರಕಾರಿ, ಅರೆ ಸರಕಾರಿ ಮತ್ತು ಖಾಸಗಿ ಆರೋಗ್ಯ ವಲಯಗಳಲ್ಲಿ ಶುಶ್ರೂಷಾ ಸಹಾಯಕರಾಗಲು ಅನುಕೂಲ. ಸ್ವಂತ ಆರೈಕೆದಾರ ಸೇವಾ ಏಜೆನ್ಸಿ ಅಥವಾ ಡೇ ಕೇರ್ ಕೇಂದ್ರ ನಡೆಸಲು ಅರ್ಹತೆ ಪಡೆಯಬಹುದು ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ಕೋರ್ಸ್ ಸಂಯೋಜಕಿ ಉಷಾ ಮರಿಯ ಪಿರೇರ, ಡಾ.ಪ್ರಥ್ವಿ ಚಂದ್ರಕಲಾ ಉಪಸ್ಥಿತರಿದ್ದರು.

Udayavani 30-10-2025

# ಸಂತ ಅಲೋಶಿಯಸ್ ವಿವಿ ಮತ್ತು ಡೀಡ್ಸ್ ಸಹಯೋಗ
# ಆರೈಕೆದಾರರಾಗಲು ಸರ್ಟಿಫಿಕೆಟ್ ಕೋರ್ಸ್

**ಮಹಾನಗರ, ಅ. 29:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ ಹಾಗೂ ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್) ಮಂಗಳೂರು ಸಹಯೋಗದೊಂದಿಗೆ ಹಿರಿಯ ನಾಗರಿಕರಿಗೆ ಆರೈಕೆದಾರರಾಗಲು ಇಚ್ಛಿಸುವ ಆಸಕ್ತರಿಗೆ ಸರ್ಟಿಫಿಕೆಟ್ ಕೋರ್ಸ್ ಆರಂಭಿಸಲಾಗುತ್ತಿದೆ.

ಸಂತ ಅಲೋಶಿಯಸ್ ವಿ.ವಿ. ಸಹಕುಲಪತಿ ವಂ। ಡಾ। ಮೆಲ್ವಿನ್ ಡಿಕುನ್ಹ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ,

ಈ ಕೋರ್ಸ್‌ನಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳು ಹಿರಿಯ ನಾಗರಿಕರ ದೈಹಿಕ, ಮಾನಸಿಕ ಆರೋಗ್ಯವನ್ನು ಕಾಪಾಡುವ ವಿವಿಧ ಬಗೆಯ ಕೌಶಲವನ್ನು ಪಡೆದು ಉನ್ನತ ಮಟ್ಟದ ಸೇವೆಯನ್ನು ನೀಡಲು ಪರಿಣತಿಯನ್ನು ಹೊಂದುತ್ತಾರೆ. ತರಬೇತಿಯಲ್ಲಿ ಉತ್ತೀರ್ಣರಾಗುವ ಯಾವುದೇ ಅಭ್ಯರ್ಥಿ ಸ್ವಗೃಹದಲ್ಲಿ, ನೆರೆಹೊರೆಯಲ್ಲಿ ಆಸ್ಪತ್ರೆಗಳಲ್ಲಿ ವಯೋವೃದ್ಧರ ಆಶ್ರಯತಾಣಗಳಲ್ಲಿ, ಡೇ ಕೇರ್ ಕೇಂದ್ರಗಳಲ್ಲಿ ಸೇವೆ ಒದಗಿಸಲು ಅರ್ಹತೆಯನ್ನು ಹೊಂದುತ್ತಾರೆ ಎಂದು ವಿವರಿಸಿದರು.

**ಕೋರ್ಸ್ ವಿವರ:** ಕೋರ್ಸ್ ಅವಧಿ ಒಂದು ತಿಂಗಳು (26 ದಿನಗಳು ಒಟ್ಟು 162 ಗಂಟೆಗಳು). ನ.3ರಂದು ಮೊದಲ ಬ್ಯಾಚ್, ಜನವರಿ 3ರಂದು ಎರಡನೇ ಬ್ಯಾಚ್ ಆರಂಭಗೊಳ್ಳಲಿದೆ. ಬಳಿಕ ಕಾಲಕಾಲಕ್ಕೆ ಬ್ಯಾಚ್ ಮುಂದುವರಿಯಲಿದೆ. ಉದ್ಯೋಗದಲ್ಲಿರುವವರಿಗೆ ವಾರಾಂತ್ಯದ ಬ್ಯಾಚನ್ನು 2026ರ ಫೆಬ್ರವರಿಯಿಂದ ನಡೆಸಲಾಗುವುದು (ವರ್ಷದ 26 ರವಿವಾರ). ಮಂಗಳೂರು ನಗರದ ಹೊರವಲಯದವರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು.

ಆರ್ಥಿಕ ಅನಾನುಕೂಲ ಇರುವ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನ ಅಥವಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು ಎಂದರು.

**ಅನುಕೂಲಗಳು:** ತರಬೇತಿ ಹೊಂದಿ ಪ್ರಮಾಣ ಪತ್ರ ಪಡೆದವರಿಗೆ ವಿವಿಧ ಆಸ್ಪತ್ರೆ, ವೃದ್ಧಾಶ್ರಮ, ಹಿರಿಯ ನಾಗರಿಕರ ಡೇಕೇರ್ ಕೇಂದ್ರಗಳಲ್ಲಿ ಆರೈಕೆದಾರರನ್ನು ಒದಗಿಸುವ ಏಜೆನ್ಸಿಗಳಲ್ಲಿ ಉದ್ಯೋಗ ಲಭ್ಯ.

ತುಳು, ಕೊಂಕಣಿ, ಬ್ಯಾರಿ, ಅರೆಬಿಕ್, ಮಲಯಾಳ, ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಹೀಬ್ರೂ ಮಾತಾಡಲು ಬಲ್ಲವರಿಗೆ ವಿದೇಶಗಳಲ್ಲಿ ವಿಪುಲ ಅವಕಾಶ.

ದ್ವಿಚಕ್ರ ವಾಹನ ಚಲಾಯಿಸಲು ಬಲ್ಲವರಿಗೆ, ಪಾಸ್‌ಪೋರ್ಟ್ ಇದ್ದವರಿಗೆ ತತ್‌ಕ್ಷಣ ಉದ್ಯೋಗ ಅವಕಾಶ. ಸರಕಾರಿ, ಅರೆಸರಕಾರಿ ಮತ್ತು ಖಾಸಗಿ ಆರೋಗ್ಯ ವಲಯಗಳಲ್ಲಿ ಶುಶ್ರೂಷಾ ಸಹಾಯಕರಾಗಲು ಅನುಕೂಲ. ಸ್ವಂತ ಆರೈಕೆದಾರ ಸೇವಾ ಏಜೆನ್ಸಿ ಅಥವಾ ಡೇಕೇರ್ ಕೇಂದ್ರ ನಡೆಸಲು ಅರ್ಹತೆಯನ್ನು ಪಡೆಯಬಹುದು ಎಂದರು.

ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ಕೋರ್ಸ್ ಸಂಯೋಜಕಿ ಉಷಾ ಮರಿಯ ಪಿರೇರ, ಡಾ। ಪೃಥ್ವಿ ಚಂದ್ರಕಲಾ ಉಪಸ್ಥಿತರಿದ್ದರು.

The Hindu 30-10-2025

# St. Aloysius to offer certificate course on caring for elders

**The Hindu Bureau**
MANGALURU

St. Aloysius (Deemed-to-be-University), Mangaluru, will offer a certificate course on taking care of elders starting from November 3. The course has been developed in association with Development Education Service (DEEDS), Mangaluru.

A release from the institution said on Wednesday that the duration of the course is one month (totally 162 hours). If the first batch will start on November 3, the second batch will commence on January 3, 2026. Subsequent batches will be announced later.

It will also offer a weekend batch (26 Sundays a year) for those employed, from February 2026. The course fee is ₹7,500 per candidate. Accommodation will be provided for those from outside Mangaluru. Scholarship or fee concessions will be provided to candidates with financial difficulties.



St. Aloysius (Deemed-to-be-University)

Candidates who complete this course will have the expertise to provide various types of services to maintain the physical and mental health of senior citizens. Any candidate who passes this course will be prepared to provide services in their own homes, neighbourhoods, hospitals, nursing homes, and daycare centres.

The course has been designed based on the long-term professional experience of medical experts, experienced nurses, psychology experts, and social work experts. It is a non-medical certificate course and is designed for candidates who wish to pursue a career as caregivers after completing training in various service organisations, old age homes, and organisations that run nursing centres.

Ageing is a universal reality, and the number of senior citizens among the growing population cannot be underestimated. Care and concern for the elderly is not just the responsibility of the medical profession. Medicines and treatments can only keep them free from disease, but non-medical measures are equally important in keeping them healthy, the release said.

*Kannada Prabha 30-10-2025*

# ಹಿರಿಯ ನಾಗರಿಕರ ಆರೈಕೆಗೆ ಅಲೋಶಿಯಸ್ ಕಾಲೇಜಿನಲ್ಲಿ ಸರ್ಟಿಫಿಕೆಟ್ ಕೋರ್ಸ್ ಆರಂಭ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಹಾಗೂ ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್) ಮಂಗಳೂರು ಜಂಟಿ ಸಹಯೋಗದೊಂದಿಗೆ ಹಿರಿಯ ನಾಗರಿಕರಿಗೆ ಆರೈಕೆದಾರರಾಗಲು ಇಚ್ಚಿಸುವ ಆಸಕ್ತರಿಗೆ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲಾಗುತ್ತಿದೆ.

ಈ ಕೋರ್ಸ್‌ನಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳು ಹಿರಿಯ ನಾಗರಿಕರ ದೈಹಿಕ, ಮಾನಸಿಕ ಆರೋಗ್ಯವನ್ನು ಕಾಪಾಡುವ ವಿವಿಧ ಬಗೆಯ ಕೌಶಲ್ಯವನ್ನು ಪಡೆದು ಉನ್ನತ ಮಟ್ಟದ ಸೇವೆಯನ್ನು ನೀಡಲು ಪರಿಣತಿಯನ್ನು ಹೊಂದುತ್ತಾರೆ. ತರಬೇತಿಯಲ್ಲಿ ಉತ್ತೀರ್ಣರಾಗುವ ಯಾವುದೇ ಅಭ್ಯರ್ಥಿ ಸ್ವಗೃಹದಲ್ಲಿ, ನೆರೆಹೊರೆಯಲ್ಲಿ, ಆಸ್ಪತ್ರೆಗಳಲ್ಲಿ ವಯೋವೃದ್ಧರ ಆಶ್ರಯತಾಣಗಳಲ್ಲಿ, ಡೇ ಕೇರ್ ಕೇಂದ್ರಗಳಲ್ಲಿ ಸೇವೆ ಒದಗಿಸಲು ಅರ್ಹತೆಯನ್ನು ಹೊಂದುತ್ತಾರೆ ಎಂದು ಸಂತ ಅಲೋಶಿಯಸ್ ವಿವಿ ಪ್ರೊ ವೈಸ್ ಛಾನ್ಸಲರ್ ಫಾ. ಡಾ. ಮೆಲ್ವಿನ್ ಡಿಕುನ್ಹಾ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

**ಕೋರ್ಸ್ ವಿವರ:** ಕೋರ್ಸ್ ಅವಧಿ ಒಂದು ತಿಂಗಳು (126 ದಿನಗಳು ಒಟ್ಟು 162 ಗಂಟೆಗಳು). ನ.3ರಂದು ಮೊದಲ ಬ್ಯಾಚ್, ಜನವರಿ 3ರಂದು ಎರಡನೇ ಬ್ಯಾಚ್ ಆರಂಭಗೊಳ್ಳಲಿದೆ. ಬಳಿಕ ಕಾಲಕಾಲಕ್ಕೆ ಬ್ಯಾಚ್ ಮುಂದುವರೆಯಲಿದೆ. ಉದ್ಯೋಗದಲ್ಲಿರುವವರಿಗೆ ವಾರಾಂತ್ಯದ ಬ್ಯಾಚನ್ನು 2026ರ ಫೆಬ್ರವರಿಯಿಂದ ನಡೆಸಲಾಗುವುದು (ವರ್ಷದ 26 ಭಾನುವಾರ). ಮಂಗಳೂರು ನಗರದಹೊರವಲಯದವರಿಗೆವಸತಿವ್ಯವಸ್ಥೆಕಲ್ಪಿಸಲಾಗುವುದು ಕೋರ್ಸ್ ವೆಚ್ಚ ಪ್ರತಿ ಅಭ್ಯರ್ಥಿಗೆ 7,500 ರು. ಊಟ, ವಸತಿ ಪ್ರತ್ಯೇಕ.

ಆರ್ಥಿಕ ಅನಾನುಕೂಲತೆ ಇರುವ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನ ಅಥವಾ ಶುಲ್ಕದಲ್ಲಿ ರಿಯಾಯತಿ ನೀಡಲಾಗುವುದು ಎಂದರು.

**ಅನುಕೂಲಗಳು:** ಪ್ರಮಾಣ ಪತ್ರ ಪಡೆದವರಿಗೆ ವಿವಿಧ ಆಸ್ಪತ್ರೆ, ವೃದ್ಧಾಶ್ರಮ, ಹಿರಿಯ ನಾಗರಿಕರ ಡೇಕೇರ್ ಕೇಂದ್ರಗಳಲ್ಲಿ ಆರೈಕೆದಾರರನ್ನು ಒದಗಿಸುವ ಏಜೆನ್ಸಿಗಳಲ್ಲಿ ಉದ್ಯೋಗ ಲಭ್ಯ.

ತುಳು, ಕೊಂಕಣಿ, ಬ್ಯಾರಿ, ಅರೆಬಿಕ್, ಮಲೆಯಾಳಂ, ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಹೀಬ್ರೂ ಮಾತಾಡಲು ಬಲ್ಲವರಿಗೆ ವಿದೇಶಗಳಲ್ಲಿ ವಿಪುಲ ಅವಕಾಶ. ದ್ವಿಚಕ್ರ ವಾಹನ ಚಲಾಯಿಸಲು ಬಲ್ಲವರಿಗೆ, ಪಾಸ್ ಪೋರ್ಟ್ ಇದ್ದವರಿಗೆ ತಕ್ಷಣದ ಉದ್ಯೋಗ ಅವಕಾಶ. ಸರಕಾರಿ, ಅರೆಸರ್ಕಾರಿ ಮತ್ತು ಖಾಸಗಿ ಆರೋಗ್ಯ ವಲಯಗಳಲ್ಲಿ ಶುಶ್ರೂಷಾ ಸಹಾಯಕರಾಗಲು ಅನುಕೂಲ. ಸ್ವಂತ ಆರೈಕೆದಾರ ಸೇವಾ ಏಜೆನ್ಸಿ ಅಥವಾ ಡೇಕೇರ್ ಕೇಂದ್ರ ನಡೆಸಲು ಅರ್ಹತೆಯನ್ನು ಪಡೆಯಬಹುದು ಎಂದರು.

ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ಕೋರ್ಸ್ ಸಂಯೋಜಕಿ ಉಷಾ ಮರಿಯ ಪಿರೇರ, ಡಾ. ಪೃಥ್ವಿ ಚಂದ್ರಕಲಾ ಇದ್ದರು.

*Hosadigantha 30-10-2025*

# ಅಲೋಶಿಯಸ್ ವಿವಿಯಿಂದ ಹಿರಿಯ ನಾಗರಿಕರಿಗಾಗಿ ಸರ್ಟಿಫಿಕೇಟ್ ಕೋರ್ಸ್ ಆರಂಭ

**ಮಂಗಳೂರು:** ಸಂತಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಹಾಗೂ ಡೆವಲಪ್‌ಮೆಂಟ್ ಎಜ್ಯುಕೇಶನ್ ಸರ್ವಿಸ್ (ಡೀಡ್ಸ್) ಮಂಗಳೂರು ಜಂಟಿ ಸಹಯೋಗದೊಂದಿಗೆ ಹಿರಿಯ ನಾಗರಿಕರಿಗೆ ಆರೈಕೆದಾರರಾಗಲು ಇಚ್ಛಿಸುವ ಆಸಕ್ತರಿಗೆ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲಾಗುತ್ತಿದೆ.

ಈ ಕೋರ್ಸ್‌ನಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳು ಹಿರಿಯ ನಾಗರಿಕರ ದೈಹಿಕ, ಮಾನಸಿಕ ಆರೋಗ್ಯವನ್ನು ಕಾಪಾಡುವ ವಿವಿಧ ಬಗೆಯ ಕೌಶಲ್ಯವನ್ನು ಪಡೆದು ಉನ್ನತ ಮಟ್ಟದ ಸೇವೆಯನ್ನು ನೀಡಲು ಪರಿಣತಿಯನ್ನು ಹೊಂದುತ್ತಾರೆ. ತರಬೇತಿಯಲ್ಲಿ ಉತ್ತೀರ್ಣರಾಗುವ ಯಾವುದೇ ಅಭ್ಯರ್ಥಿ ಸ್ವಗೃಹದಲ್ಲಿ, ನೆರೆಹೊರೆಯಲ್ಲಿ, ಆಸ್ಪತ್ರೆಗಳಲ್ಲಿ ವಯೋವೃದ್ಧರ ಆಶ್ರಯತಾಣಗಳಲ್ಲಿ, ಡೇಕೇರ್ ಕೇಂದ್ರಗಳಲ್ಲಿ ಸೇವೆ ಒದಗಿಸಲು ಅರ್ಹತೆಯನ್ನು ಹೊಂದುತ್ತಾರೆ ಎಂದು ಸಂತ ಅಲೋಶಿಯಸ್ ವಿವಿ ಪ್ರೊ ವೈಸ್ ಛಾನ್ಸಲರ್ ಫಾ. ಡಾ. ಮೆಲ್ವಿನ್ ಡಿಕುನ್ಹ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

**ಕೋರ್ಸ್ ವಿವರ**

ಕೋರ್ಸ್ ಅವಧಿ ಒಂದು ತಿಂಗಳು (126 ದಿನಗಳು ಒಟ್ಟು 162 ಗಂಟೆಗಳು). ನ.3ರಂದು ಮೊದಲ ಬ್ಯಾಚ್, ಜನವರಿ 3ರಂದು ಎರಡನೇ ಬ್ಯಾಚ್ ಆರಂಭಗೊಳ್ಳಲಿದೆ. ಬಳಿಕ ಕಾಲಕಾಲಕ್ಕೆ ಬ್ಯಾಚ್ ಮುಂದುವರೆಯಲಿದೆ. ಉದ್ಯೋಗದಲ್ಲಿರುವವರಿಗೆ ವಾರಾಂತ್ಯದ ಬ್ಯಾಚನ್ನು 2026ರ ಫೆಬ್ರವರಿಯಿಂದ ನಡೆಸಲಾಗುವುದು (ವರ್ಷದ 26 ಭಾನುವಾರ). ಮಂಗಳೂರು ನಗರದ ಹೊರವಲಯದವರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಕೋರ್ಸ್ ವೆಚ್ಚ ಪ್ರತಿ ಅಭ್ಯರ್ಥಿಗೆ ರೂ. 7500. ಊಟ, ವಸತಿ ಪ್ರತ್ಯೇಕ.

ಆರ್ಥಿಕ ಅನಾನುಕೂಲತೆ ಇರುವ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನ ಅಥವಾ ಶುಲ್ಕದಲ್ಲಿ ರಿಯಾಯತಿ ನೀಡಲಾಗುವುದು ಎಂದರು.

ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ಕೋರ್ಸ್ ಸಂಯೋಜಕಿ ಉಷಾ ಮರಿಯ ಪಿರೇರ, ಡಾ. ಪೃಥ್ವಿ, ಚಂದ್ರಕಲಾ ಉಪಸ್ಥಿತರಿದ್ದರು.

## ಅನುಕೂಲಗಳು

**ತರಬೇತಿ ಹೊಂದಿ ಪ್ರಮಾಣ ಪತ್ರ ಪಡೆದವರಿಗೆ ವಿವಿಧ ಆಸ್ಪತ್ರೆ, ವೃದ್ಧಾಶ್ರಮ, ಹಿರಿಯ ನಾಗರಿಕರ ಡೇಕೇರ್ ಕೇಂದ್ರಗಳಲ್ಲಿ ಆರೈಕೆದಾರರನ್ನು ಒದಗಿಸುವ ಏಜೆನ್ಸಿಗಳಲ್ಲಿ ಉದ್ಯೋಗ ಲಭ್ಯ. ತುಳು, ಕೊಂಕಣಿ, ಬ್ಯಾರಿ, ಅರೆಬಿಕ್, ಮಲೆಯಾಳಂ, ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಹೀಬ್ರೂ ಮಾತಾಡಲು ಬಲ್ಲವರಿಗೆ ವಿದೇಶಗಳಲ್ಲಿ ವಿಪುಲ ಅವಕಾಶ. ದ್ವಿಚಕ್ರ ವಾಹನ ಚಲಾಯಿಸಲು ಬಲ್ಲವರಿಗೆ, ಪಾಸ್ ಪೋರ್ಟ್ ಇದ್ದವರಿಗೆ ತಕ್ಷಣದ ಉದ್ಯೋಗ ಅವಕಾಶ. ಸರಕಾರಿ, ಅರೆಸರ್ಕಾರಿ ಮತ್ತು ಖಾಸಗಿ ಆರೋಗ್ಯ ವಲಯಗಳಲ್ಲಿ ಶುಶ್ರೂಷಾ ಸಹಾಯಕರಾಗಲು ಅನುಕೂಲ. ಸ್ವಂತ ಆರೈಕೆದಾರ ಸೇವಾ ಏಜೆನ್ಸಿ ಅಥವಾ ಡೇಕೇರ್ ಕೇಂದ್ರ ನಡೆಸಲು ಅರ್ಹತೆಯನ್ನು ಪಡೆಯಬಹುದು ಎಂದರು.**

*Indian Express 30-10-2025*

# St Aloysius, DEEDS to launch caregiving course

**EXPRESS NEWS SERVICE**
@ Mangaluru

ST Aloysius University (Deemed to-be University), in collaboration with Development Education Service (DEEDS), Mangaluru, is set to launch a certificate course for individuals interested in becoming caregivers for senior citizens.

The training program aims to equip participants with the knowledge and skills required to support the physical and mental well-being of elderly individuals. Graduates of the course will be qualified to provide services at homes, in their communities, as well as in hospitals, nursing homes, and daycare centres.

The one-month course will begin with its first batch on November 3, followed by a second batch starting January 3. In addition, weekend batches will commence in February 2026, conducted every Sunday for a year, with accommodation facilities provided for participants.

Candidates facing financial difficulties will be eligible for scholarships or fee concessions. Upon completion, trained caregivers will have employment opportunities in hospitals, nursing homes, senior citizen daycare centers, and caregiver supply agencies.

The programme also opens pathways to work as nursing assistants in government, non-governmental, and private healthcare sectors.

*Times of India 30-10-2025*

# Course for elder care

**Mangaluru:** In a significant move to address the growing need for skilled caregivers for senior citizens, St Aloysius (Deemed to be University), in collaboration with Development Education Service (DEEDS), has announced the launch of a comprehensive certificate course.

The initiative aims to equip individuals with the necessary skills to provide holistic care to the elderly, ensuring their physical and mental wellbeing. Providing details about the course, Fr Melwyn D'Cunha, pro-vice-chancellor of St Aloysius, told reporters on Wednesday that the course, set to commence its first batch on Nov 3, 2025, spans 26 days, totalling 162 hours of intensive training. It is designed to prepare candidates to offer services in various settings, including homes, hospitals, nursing homes, and daycare centres. Recognising the universal reality of ageing, the programme emphasises an integrated approach to elder care, drawing insights from psychology, physiology, biology, and sociology. TNN

*Vijayakarnataka 30-10-2025*

## ದಿಶೆಲ್ ಲೆವಿನ್ಸ್‌ಗೆ ಪಿಎಚ್‌ಡಿ



**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ವಾಣಿಜ್ಯ, ಹಣಕಾಸು ಮತ್ತು ಲೆಕ್ಕಶಾಸ್ತ್ರ ಶಾಲೆಯ ಸಹಾಯಕ ಪ್ರಾಧ್ಯಾಪಕರಾದ ಡಿಶೆಲ್ ಲೆವಿನ್ಸ್ ಫರ್ನಾಂಡಿಸ್ ಅವರ ಉಡುಪಿ ಜಿಲ್ಲೆಯ ಯುವಜನರ ಜೀವನಶೈಲಿ ಉತ್ಪನ್ನಗಳ ಆನ್‌ಲೈನ್ ಖರೀದಿ ನಿರ್ಣಯಗಳಲ್ಲಿ ಉದ್ಭವಿಸುತ್ತಿರುವ ಪ್ರವೃತ್ತಿಗಳ ಅಧ್ಯಯನ ಮಹಾ ಪ್ರಬಂಧಕ್ಕೆ ಶ್ರೀನಿವಾಸ ವಿಶ್ವವಿದ್ಯಾಲಯ ಪಿಎಚ್‌ಡಿ ನೀಡಿ ಗೌರವಿಸಿದೆ. ಅವರು ನಗರದ ಶ್ರೀನಿವಾಸ ವಿವಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಕಾಮರ್ಸ್‌ನ ಸಂಶೋಧನಾ ಪ್ರಾಧ್ಯಾಪಕಿ ಡಾ. ಶೈಲಾಶ್ರೀ ವಿ.ಟಿ. ಮಾರ್ಗದರ್ಶನದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಿದ್ದರು. ಡಿಶೆಲ್ ಲೆವಿನ್ಸ್ ಕುಂದಾಪುರದ ಹಂಗಳೂರಿನ ಪ್ಯಾಟ್ರಿಕ್ ಮತ್ತು ಲೆನ್ನಿ ಫರ್ನಾಂಡಿಸ್ ಅವರ ಪುತ್ರಿ ಹಾಗೂ ಮಂಗಳೂರಿನ ಕುಲಶೇಖರದ ಎಲ್ಲನ್ ಡೆನ್ಸಿಲ್ ಡಿಸಿಲ್ವ ಅವರ ಪತ್ನಿ.

*Viajayavani 31-10-2025*

## ಡೆಶೆಲ್ ಫರ್ನಾಂಡಿಸ್‌ಗೆ ಪಿಎಚ್.ಡಿ



ಮಂಗಳೂರು: ಸಂಶೋಧನಾ ವಿದ್ಯಾರ್ಥಿನಿ ಡೆಶೆಲ್ ಲೆವಿನ್ಸ್ ಫರ್ನಾಂಡಿಸ್ ಅವರ "A Study on the Emerging Trends in Online Purchase Decisions for Lifestyle Products Among the Youth in Udupi District" ಮಹಾಪ್ರಬಂಧಕ್ಕೆ ಶ್ರೀನಿವಾಸ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ಪ್ರದಾನ ಮಾಡಿದೆ.

ಶ್ರೀನಿವಾಸ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಕಾಮರ್ಸ್ ಸಂಶೋಧನಾ ಪ್ರಾಧ್ಯಾಪಕಿ ಡಾ. ಶೈಲಶ್ರೀ. ವಿ.ಟಿ. ಅವರ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ಡೆಶೆಲ್ ಲೆವಿನ್ಸ್ ಫರ್ನಾಂಡಿಸ್ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿಯಾಗಿದ್ದು, ಕುಂದಾಪುರದ ಪ್ಯಾಟ್ರಿಕ್-ಲೆನ್ನಿ ಫರ್ನಾಂಡಿಸ್ ದಂಪತಿ ಪುತ್ರಿ, ಮಂಗಳೂರಿನ ಎಲ್ಲನ್ ಡೆನ್ಸಿಲ್ ಡಿಸಿಲ್ವಾ ಅವರ ಪತ್ನಿ.

*Udayavani 30-10-2025*

## ದಿಶೆಲ್ ಫೆರ್ನಾಂಡಿಸ್ ಅವರಿಗೆ ಪಿಎಚ್.ಡಿ.



**ಮಹಾನಗರ, ಅ. 29:** ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ವಾಣಿಜ್ಯ, ಹಣಕಾಸು ಮತ್ತು ಲೆಕ್ಕಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಿಕೆ ದಿಶೆಲ್ ಲೆವಿನ್ಸ್ ಫೆರ್ನಾಂಡಿಸ್ ಅವರು ಮಂಡಿಸಿದ 'ಉಡುಪಿ ಜಿಲ್ಲೆಯ ಯುವಜನರ ಜೀವನಶೈಲಿ ಉತ್ಪನ್ನಗಳ ಆನ್‌ಲೈನ್ ಖರೀದಿ ನಿರ್ಣಯಗಳಲ್ಲಿ ಉದ್ಭವಿಸುತ್ತಿರುವ ಪ್ರವೃತ್ತಿಗಳ ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಶ್ರೀನಿವಾಸ ವಿಶ್ವವಿದ್ಯಾಲಯವು ಪಿಎಚ್.ಡಿ. ನೀಡಿದೆ.

ಅವರಿಗೆ ಮಂಗಳೂರು ಶ್ರೀನಿವಾಸ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆಂಡ್ ಕಾಮರ್ಸ್‌ನ ಸಂಶೋಧನ ಪ್ರಾಧ್ಯಾಪಿಕೆ ಡಾ| ಶೈಲಶ್ರೀ ವಿ.ಟಿ. ಮಾರ್ಗದರ್ಶನ ನೀಡಿದ್ದರು. ಅವರು ಕುಲಶೇಖರದ ಎಲ್ಲನ್ ಡೆನ್ಸಿಲ್ ಡಿ'ಸಿಲ್ವ ಅವರ ಪತ್ನಿ.

Udayavani 19-10-2025

# ಭವಿಷ್ಯದ ಮಾರ್ಗದರ್ಶಕ




ಶಿಕ್ಷಣವನ್ನು ಹಲವು ಕೋನಗಳಿಂದ ನೋಡಲು ಅವಕಾಶವಿದೆ. 21ನೇ ಶತಮಾನದಲ್ಲಿ ಶಿಕ್ಷಣವು ಅಂತಿಮ ಗುರಿಯಾಗಿಲ್ಲ, ಬದಲಾಗಿ ಗುರಿ ತಲುಪುವ ಸಾಧನವಾಗಿ ಮಾರ್ಪಟ್ಟಿದೆ. ಶಿಕ್ಷಣದ ಗುರಿ ಕೇವಲ ಉತ್ತಮ ಪದವೀಧರರನ್ನು ಸಿದ್ಧಪಡಿಸುವುದಾದರೆ, ಅದು ಸರಳವಾದ ದಾರಿ. ಆದರೆ ಶಿಕ್ಷಣದ ಗುರಿ ಒಬ್ಬ ಸಂಪೂರ್ಣ, ಸಂಸ್ಕೃತ ಮತ್ತು ಸಮಗ್ರ ವ್ಯಕ್ತಿತ್ವವನ್ನು ರೂಪಿಸುವುವುದು. ಈ ಮಾರ್ಗವು ಹೆಚ್ಚು ಸಂಕೀರ್ಣವಾಗಿರುತ್ತದೆ. ಯಶಸ್ಸು ಮತ್ತು ವೈಯಕ್ತಿಕ ಸಂತೋಷದ ಜತೆಗೆ ತಮ್ಮ ಸುತ್ತಲಿನವರೊಂದಿಗೆ ಅನುಭೂತಿ ಹೊಂದುವ ನಾಗರಿಕರನ್ನು ಸೃಷ್ಟಿಸುವುದೇ ನಿಜವಾದ ಶಿಕ್ಷಣದ ಗುರಿಯಾಗಬೇಕು. ಇದಕ್ಕಾಗಿ ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪರಿವರ್ತಿಸಿ, ಎಲ್ಲರನ್ನೂ ಒಳಗೊಳ್ಳುವಂತೆ ಮಾಡಬೇಕಿದೆ.

ಶಿಕ್ಷಕರು ವಿದ್ಯಾರ್ಥಿಗಳಿಗೆ ಕೇವಲ ಪಾಠ ಬೋಧಿಸುವವರಲ್ಲ; ಅವರು ಪಾಲಕರು, ಸಲಹೆಗಾರರು ಮತ್ತು ರಕ್ಷಕರೂ ಹೌದು. ಹೆನ್ರಿ ಆಡಮ್ಸ್ ಹೇಳಿದಂತೆ, ಒಬ್ಬ ಶಿಕ್ಷಕ ಶಾಶ್ವತತೆಯನ್ನು ಪ್ರಭಾವಿಸುತ್ತಾನೆ; ಅವನ ಪ್ರಭಾವ ಎಲ್ಲಿ ನಿಲ್ಲುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಮಧ್ಯಮ ಶಿಕ್ಷಕರು ಹೇಳುತ್ತಾರೆ, ಉತ್ತಮ ಶಿಕ್ಷಕರು ವಿವರಿಸುತ್ತಾರೆ, ಶ್ರೇಷ್ಠ ಶಿಕ್ಷಕರು ತೋರಿಸುತ್ತಾರೆ ಮತ್ತು ಮಹಾನ್ ಶಿಕ್ಷಕರು ಪ್ರೇರೇಪಿಸುತ್ತಾರೆ ಎಂಬ ಮಾತು ಇಲ್ಲಿ ನೆನಪಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಕರಿಗೆ ದೇವರ ಸಮಾನವಾದ ಗೌರವವಿದೆ. ಶಿಷ್ಯನನ್ನು ಸಾಮಾನ್ಯತೆಯಿಂದ ಅಸಾಮಾನ್ಯತೆಯೆಡೆಗೆ ಕೊಂಡೊಯ್ಯುವ ಶಕ್ತಿ ಗುರುವಿಗಿದೆ.

ಶಿಕ್ಷಣ ವ್ಯವಸ್ಥೆಯನ್ನು ವಿಶ್ಲೇಷಿಸಿದಾಗ ನಮಗೆ ಎದುರಾಗುವ ಪ್ರಮುಖ ಗುಣವೆಂದರೆ ಅನುಭೂತಿ. ದುಃಖಕರವೆಂದರೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಈ ಗುಣವು ಮಾಯವಾಗುತ್ತಿದೆ. ಅನುಭೂತಿ ಇಲ್ಲದ ಶಿಕ್ಷಣವು ಯಾಂತ್ರಿಕವಾಗುತ್ತದೆ. ಜಾಗತೀಕರಣದಿಂದ ಜಗತ್ತು ಕಿರಿದಾಗುತ್ತಿದ್ದರೂ, ಮಾನವ ಸಂಬಂಧಗಳು ಕೇವಲ ಮೇಲ್ಮೈಯಲ್ಲಿ ಉಳಿದಿವೆ. ಮತ್ತೊಬ್ಬರ ನೋವು-ನಲಿವುಗಳಿಗೆ ಸ್ಪಂದಿಸುವ ಅಗತ್ಯವನ್ನು ನಾವು ಮರೆಯುತ್ತಿದ್ದೇವೆ. ಆದ್ದರಿಂದ ವಿದ್ಯಾರ್ಥಿಗಳಿಗೆ ಇತರರ ದೃಷ್ಟಿಕೋನದಿಂದ ಜಗತ್ತನ್ನು ನೋಡುವ ಸಾಮರ್ಥ್ಯವನ್ನು ಕಲಿಸುವುದು ಅತ್ಯಗತ್ಯ. ಬೇರೆಯವರ ಕಣ್ಣುಗಳಿಂದ ಜಗತ್ತನ್ನು ನೋಡುವುದೇ ನಿಜವಾದ ಅನುಭೂತಿ. ಇದು ನಮ್ಮ ಸಾಮಾಜಿಕ ಸಂಬಂಧಗಳನ್ನು ಪುನರ್ ನಿರ್ಮಿಸಲು ಸಹಾಯ ಮಾಡುತ್ತದೆ.

ಇಂದಿನ ಜಗತ್ತು ಶಿಕ್ಷಣದಲ್ಲಿ ಸಂಪೂರ್ಣ ಪರಿವರ್ತನೆಯನ್ನು ಬಯಸುತ್ತಿದೆ. ಉತ್ತಮ ಸಮಾಜವನ್ನು ನಿರ್ಮಿಸಲು ಶಿಕ್ಷಕರು ಸಹೋದಯ ತತ್ವವನ್ನು ಅಳವಡಿಸಿಕೊಳ್ಳಬೇಕು. ಸಹೋದಯ ಎಂದರೆ ಒಟ್ಟಿಗೆ ಅರಳುವುದು. ಕಲಿಕೆಯ ಆರಂಭದಿಂದಲೇ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜತೆಯಾಗಿ ಅರಳಲು ಪ್ರಯತ್ನಿಸಬೇಕು. ಶಿಕ್ಷಣವು ಕೇವಲ ಬುದ್ಧಿಶಕ್ತಿಯನ್ನು ಮಾತ್ರವಲ್ಲ, ಹೃದಯವನ್ನೂ ಸ್ಪರ್ಶಿಸಬೇಕು. ಶಿಕ್ಷಣ ಹೃದಯವನ್ನು ತಲುಪಿದಾಗ ಮಾತ್ರ ಅದು ಪರಿಣಾಮಕಾರಿಯಾಗುತ್ತದೆ. ಅನುಭೂತಿಯು ಎಲ್ಲರೂ ಒಂದೇ ಎಂಬ ಅರಿವನ್ನು ಮೂಡಿಸಿ, ಒಟ್ಟಾಗಿ ಮುನ್ನಡೆಯುವ ಶಕ್ತಿಯನ್ನು ನೀಡುತ್ತದೆ.

ಒಬ್ಬ ಶಿಕ್ಷಕ ದೀಪವನ್ನು ಹೊತ್ತು ಕತ್ತಲನ್ನು ದೂರ ಮಾಡುವ ಬೆಳಕಿನ ಮಾರ್ಗದರ್ಶಿ. ಈ ಮಾತಿಗೆ ಪೂರಕವಾಗಿ ನನ್ನ ಶಿಕ್ಷಕರೊಬ್ಬರು ಹೇಳಿದ ಕಥೆ ನೆನಪಾಗುತ್ತದೆ. ಒಬ್ಬ ಬಾಲಕ ಕಡಲತೀರದಲ್ಲಿ ಅಲೆಗಳಿಗೆ ದಡಕ್ಕೆ ಬಂದು ಬಿದ್ದ ನಕ್ಷತ್ರ ಮೀನುಗಳನ್ನು ಒಂದೊಂದಾಗಿ ಎತ್ತಿ ಮತ್ತೆ ಸಮುದ್ರಕ್ಕೆ ಎಸೆಯುತ್ತಿದ್ದ. ಇದನ್ನು ಕಂಡ ಹಿರಿಯರೊಬ್ಬರು, 'ಇಲ್ಲಿ ಸಾವಿರಾರು ಮೀನುಗಳಿವೆ, ನೀನು ಎಲ್ಲವನ್ನೂ ಉಳಿಸಲಾರೆ. ನಿನ್ನ ಈ ಶ್ರಮದಿಂದ ಏನು ಪ್ರಯೋಜನ?' ಎಂದು ಕೇಳಿದರು. ಅದಕ್ಕೆ ಬಾಲಕನು ಒಂದು ಮೀನನ್ನು ಕೈಗೆತ್ತಿಕೊಂಡು, 'ನಾನು ಎಲ್ಲವನ್ನೂ ಉಳಿಸಲಾರೆ, ಆದರೆ ಈ ಒಂದಕ್ಕಾದರೂ ನನ್ನಿಂದ ಬದುಕು ಸಿಕ್ಕಿತಲ್ಲ' ಎಂದು ಹೇಳಿ ಅದನ್ನು ನೀರಿಗೆ ಎಸೆದ. ಪ್ರತಿಯೊಬ್ಬ ಶಿಕ್ಷಕನ ಶ್ರಮವೂ ಇಂತಹದ್ದೇ.

'ಈಟ್ಚಟ್ಲಿಟ್ಬುಟ ಛಜಿಠ್ಚಜಿಇ್ಞಾ' ಎಂಬ ಲ್ಯಾಟಿನ್ ಮಾತಿದೆ, ಅದರರ್ಥ 'ಕಲಿಸುವುದರಿಂದ ನಾವು ಕಲಿಯುತ್ತೇವೆ.' ಈ ಮಾತು ನಮ್ಮನ್ನು ಸದಾ ಮುನ್ನಡೆಸಲಿ. ■

ಡಾ| ಚಾರ್ಲ್ಸ್ ವಿ. ಫುರ್ಟಾಡೊ
ಪ್ರಾಧ್ಯಾಪಕರು, ಆಂಗ್ಲ ವಿಭಾಗ,
ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ

Udayavani 13-10-2025



# ಕ್ಯಾತನಮಕ್ಕಿ ಆಫ್-ರೋಡ್ ಸಾಹಸ



ಎಲ್ಲಿ ಕಣ್ಣಾಯಿಸಿದರೂ ಕಾಣುವ ಸುತ್ತಲಿನ ಬೆಟ್ಟಗಳ ಸಾಲು, ಹಸುರು ಹೊದಿಕೆ ಹಾಕಿ ಒಂದರ ಮೇಲೊಂದರಂತೆ ತಂಪಾಗಿ ಮಲಗಿರುವ ಗುಡ್ಡಗಳು, ದಟ್ಟವಾದ ಕಾನನದ ಜತೆ ಕಪ್ಪು-ಬಿಳುಪು ಮೋಡಗಳ ಚಲನೆ, ತಣ್ಣಗಿನ ತಂಗಾಳಿ, ಮತ್ತು ವಿಶ್ರಾಂತಿಗಾಗಿ ಇರುವ ಬೆಂಚುಗಳು ಇವೆಲ್ಲವೂ ಪಶ್ಚಿಮಘಟ್ಟದ ಆಕರ್ಷಕ ಗಿರಿಧಾಮ ಕ್ಯಾತನಮಕ್ಕಿಯಲ್ಲಿ ಕಾಣಸಿಗುವ ದೃಶ್ಯಗಳು.

ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿರುವ ಕ್ಯಾತನಮಕ್ಕಿಗೆ ಭೇಟಿ ನೀಡಲು ನಾವು ಒಂದು ಶನಿವಾರ ಸಂಜೆ ನಿರ್ಧರಿಸಿದೆವು. ಬಿಸಿಲಿನ ಬೇಗೆಯಿಂದ ಮುಕ್ತಿ ಪಡೆಯಲು ತಂಪುಗಾಳಿ ಬೀಸುವ ಹಿಲ್ ಸ್ಟೇಷನ್‌ಗೆ ಹೋಗುವ ಯೋಜನೆ ನಮ್ಮದಾಗಿತ್ತು. ಅದೇ ರೀತಿ ಮರುದಿನ ರವಿವಾರ ಬೆಳ್ಳಂಬೆಳಗ್ಗೆ 3 ಗಂಟೆಗೆ ಮಂಗಳೂರಿನಿಂದ ಹೊರಟ ನಾವು, ಮಂಜು ಮುಸುಕಿದ ರಸ್ತೆಯಲ್ಲಿ ಹೆಡ್ ಲೈಟ್‌ಗಳನ್ನು ಡಿಮ್-ಡಿಪ್ ಮಾಡುತ್ತಲೇ ಸಾಗಿದೆವು. ಮೂಡಬಿದಿರೆ, ಕಾರ್ಕಳ, ಮತ್ತು ಸಂಸೆ ಮಾರ್ಗವಾಗಿ ಸೂರ್ಯೋದಯದ ಹೊತ್ತಿಗೆ ಕಳಸ ಪೇಟೆಯನ್ನು ತಲುಪಿದೆವು. ಅಲ್ಲಿ ಬಿಸಿ ಬಿಸಿ ಫಿಡಕ್ ಮಲೆನಾಡು ಕಾಫಿಯ ಜತೆಗೆ ಬೆಣ್ಣೆಯಲ್ಲಿ ಮಾಡಿದ ಕರ್‌ಕುರ್ ಪೂರಿ ಬಾಜಿಯನ್ನು ಸವಿದು ಕ್ಯಾತನಮಕ್ಕಿಯತ್ತ ನಮ್ಮ ಪ್ರಯಾಣ ಮುಂದುವರೆಯಿತು.

ಕಳಸ ಪೇಟೆಯಿಂದ ಸುಮಾರು 10 ಕಿ.ಮೀ. ಸಾಗಿದರೆ ಬಲಿಗೆ ಎಂಬ ಪುಟ್ಟ ಗ್ರಾಮ ಸಿಗುತ್ತದೆ. ಅಲ್ಲಿಂದ ಕ್ಯಾತನಮಕ್ಕಿಗೆ ಹೋಗಲು ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಬಳಿ ಇರುವ ಗೇಟ್ ಮೂಲಕ ಪ್ರವೇಶಿಸಬೇಕು. ನಾವು ತಲಾ 50 ರೂಪಾಯಿಯಂತೆ, 200 ರೂಪಾಯಿ ಶುಲ್ಕ ಪಾವತಿಸಿ ರಶೀದಿ ಪಡೆದೆವು. ಅಲ್ಲಿಂದ ಕ್ಯಾತನಮಕ್ಕಿ ಗಿರಿಧಾಮವನ್ನು ತಲುಪಲು ನಮಗೆ ಕೇವಲ ಎರಡು ಆಯ್ಕೆಗಳು ಲಭ್ಯವಿದ್ದವು: ಕಾಲ್ನಡಿಗೆ (ಚಾರಣ) ಅಥವಾ ಬಾಡಿಗೆ 4x4 ಜೀಪು. ನಾವು ಆರಿಸಿದ್ದು ಆಫ್-ರೋಡ್ ಜೀಪು. ಎಂಟು ನೂರು ರೂಪಾಯಿಯಿಂದ ಸಾವಿರದ ವರೆಗೆ ದರವಿದ್ದರೂ, ಚೌಕಾಸಿ ಮಾಡಿ ನಿಗದಿತ ದರದಲ್ಲಿ ಜೀಪು ಹತ್ತಿದೆವು.

ಕೇವಲ 3 ಕಿ.ಮೀ. ದೂರ ಸಾಗುತ್ತಿದ್ದಂತೆಯೇ ಪ್ರಕೃತಿ ರಮಣೀಯ ದೃಶ್ಯಗಳು ಎದುರಾದವು. ಆದರೆ ರಸ್ತೆ ಮಾತ್ರ ಸೀದಾ-ಸಾದಾ ಇರಲಿಲ್ಲ! ದಾರಿಯುದ್ದಕ್ಕೂ ದೊಡ್ಡ ದೊಡ್ಡ ಕಲ್ಲುಗಳು, ಜೇಡಿಮಣ್ಣಿನಿಂದ ತುಂಬಿದ ಹೊಂಡಗುಂಡಿಗಳಿದ್ದವು. ಜೀಪಿನ ಆ ಹಾರಿಬಲ್ ಡ್ರೈವ್‌ನಿಂದಾಗಿ ಕೆಲವರು ದೇವರ ಸ್ತುತಿ ಹೇಳಿಕೊಳ್ಳುತ್ತಾ ಬರುತ್ತಿದ್ದರೆ, ಇನ್ನು ಕೆಲವರು 'ಮನೆಯಲ್ಲಿ ಕುಟುಂಬ ಸಂಸಾರವಿದೆ, ಜೀವ ಕೈಯಲ್ಲಿ ಹಿಡಿದು ಇಷ್ಟು ಕಷ್ಟಪಟ್ಟು ಹೋಗಬೇಕಾ?' ಎಂದು ಗುಣುಗುತ್ತಿದ್ದರು. ಆದರೆ ನಾನೂ ಮತ್ತು ನನ್ನ ಸ್ನೇಹಿತೆ ಭವ್ಯ ಮೇಡಂ, ಏನೂ ಆಗುವುದಿಲ್ಲ, ಇವೆಲ್ಲವೂ ನಮ್ಮ ಲೈಫ್ ಟೈಂ ಮೆಮೊರೀಸ್ ಎಂದು ಹೇಳಿ ಆ ಸಾಹಸೀ ಪ್ರಯಾಣವನ್ನು ಆನಂದಿಸುತ್ತಿದ್ದೆವು. ಅಷ್ಟರಲ್ಲಿ ನಮ್ಮ ಡ್ರೈವರಣ್ಣ 'ಅಯ್ಯೋ ಮೇಡಂ ಅವ್ರೆ, ಇಷ್ಟಕ್ಕೇ ಹೀಗೆ ಅಂದ್ರೆ ಏನು! ನೀವು ಮಳೆಗಾಲಕ್ಕೆ ಈ ರಸ್ತೆಯಲ್ಲಿ ಪ್ರಯಾಣ ಮಾಡಬೇಕು, ಅದರಲ್ಲಿರುವ ಮಜಾನೇ ಬೇರೆ ಎಂದರು.

ಎಲ್ಲ ಕಷ್ಟಗಳನ್ನು ದಾಟಿ ಕೊನೆಗೆ ನಾವು ನಮ್ಮ ಗುರಿ ತಲುಪಿದೆವು. ಆ ಸುಂದರ ಗಿರಿಧಾಮದ ಅನುಭವ ಪಡೆದಾಗಲಂತೂ ಆ ರಸ್ತೆಯಲ್ಲಿ ಪಟ್ಟ ಶ್ರಮವೆಲ್ಲಾ ಮಾಯವಾಯಿತು. ಸಾಹಸೀ ಪ್ರಯಾಣ ಮಾಡಬೇಕೆಂದಿರುವವರು ತಮ್ಮ ಮೈ-ಕೈ ಗಟ್ಟಿಯಿರುವ ಯೌವನದಲ್ಲೇ ಇಲ್ಲಿಗೆ ಬಂದು ಈ ಸುಂದರ ತಾಣವನ್ನು ವೀಕ್ಷಿಸಬೇಕು. ಇವತ್ತಲ್ಲ, ನಾಳೆ ಎಂದು ದಿನಗಳನ್ನು ಮುಂದೂಡುತ್ತಾ ಹೋದರೆ ವೃದ್ಧಾಪ್ಯದಲ್ಲಿ ಈ ಸುಂದರ ಅನುಭವದಿಂದ ವಂಚಿತರಾಗಬೇಕಾದೀತು. ■



• ಅಶ್ವಿನಿ
ಸಂತ ಅಲೋಶಿಯಸ್ ಪರಿಗಣಿತ ವಿವಿ, ಮಂಗಳೂರು